ನೀರು ಸರಬರಾಜು ನಿರ್ವಹಣೆ

1.	ಚಿಕ್ಕಮಗಳೂರು ನಗರಸಭೆ	ಚಿಕ್ಕಮಗಳೂರು ನೀರು ಸರಬರಾಜು
2.	ಉಡುಪಿ ಪುರಸಭೆ	ಉಡುಪಿ ನೀರು ಸರಬರಾಜು
3.	ಬೈಂದೂರು ಪುರಸಭೆ	ಬೈಂದೂರು ನೀರು ಸರಬರಾಜು
4.	ಸುಳ್ಯ ಮಂಡಲ ಪಂಚಾಯತ್	ಸುಳ್ಯ ನೀರು ಸರಬರಾಜು
5.	ಚನ್ನರಾಯಪಟ್ಟಣ ಪುರಸಭೆ	ಚನ್ನರಾಯಪಟ್ಟಣ ನೀರು ಸರಬರಾಜು ಯೋಜನೆ
6.	ಬೆಳ್ತಂಗಡಿ ಪುರಸಭೆ	ಬೆಳ್ತಂಗಡಿ ನೀರು ಸರಬರಾಜು ಯೋಜನೆ
7.	ಬೀರೂರು ಪುರಸಭೆ	ಬೀರೂರು ನೀರು ಸರಬರಾಜು.

ಒಳಚರಂಡಿ ನಿರ್ವಹಣೆ

1.	ಮಂಗಳೂರು ಮಹಾನಗರ ಪಾಲಿಕೆ	ಮಂಗಳೂರು ಒಳಚರಂಡಿ ವ್ಯವಸ್ಥೆ
2.	ಚಿಕ್ಕಮಗಳೂರು ನಗರಸಭೆ	ಚಿಕ್ಕಮಗಳೂರು ಒಳಚರಂಡಿ ವ್ಯವಸ್ಥೆ
3.	ಉಡುಪಿ ಪುರಸಭೆ	ಉಡುಪಿ ಒಳಚರಂಡಿ ವ್ಯವಸ್ಥೆ

ಹುಬ್ಬಳ್ಳಿ- ಧಾರವಾಡ ನಗರಗಳಲ್ಲಿ ಹೊಸ ಮಾರ್ಗಗಳ ರಚನೆ

557 - ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ -ಹುಬ್ಬಳ್ಳಿ ಮಹಾನಗರದ ಬೆಳವಣಿಗೆಯ ದೃಷ್ಟಿಯಿಂದ ಹೊಸ ಮಾರ್ಗಗಳನ್ನು ರಚಿಸುವ ಯೋಜನೆ ಏನಾದರೂ ಇದೆಯೇ; ಇದ್ದರೆ ಅದರ ಪೂರ್ಣ ವಿವರ ನೀಡುವುದು?

ಆ) ಹುಬ್ಬಳ್ಳಿ ರೈಲ್ವೆ ಗೂಡ್ಸ ಶೆಡ್ ಚಿಕ್ಕದಾಗಿರುವುದರಿಂದ ಅಮರಗೋಳ ಮಾರುಕಟ್ಟೆಯ ಹತ್ತಿರ ಗೂಡ್ಸ ಶೆಡ್ ನಿರ್ಮಿಸುವ ಯೋಜನೆ ಮಾಡುವಿರಾ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಈ ರೀತಿಯ ಪ್ರಸ್ತಾವನೆ ಇರುವುದಿಲ್ಲ.

12.40 ಪಿ.ಎಂ.

"ಸಭೆಯ ಮುಂದಿಡಲ್ಪಾಗುವ ಕಾಗದಪತ್ರಗಳ ಪಟ್ಟಿ"

I. ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ)ರವರ ಪರವಾಗಿ :

ಭಾರತ ಸಂವಿಧಾನದ 323(2)ನೇ ಅನುಚ್ಛೇದದ ಮೇರೆಗೆ ;

1) 1993-94ನೇ ಸಾಲಿನ ಕರ್ನಾಟಕ ಲೋಕಸೇವಾ ಆಯೋಗದ ವಾರ್ಷಿಕ ವರದಿ.

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(7)ನೇ ಕಲಮಿನ ಮೇರೆಗೆ,

2) 1ನೇ ಏಪ್ರಿಲ್ 1994ರಿಂದ 31ನೇ ಮಾರ್ಚ 1995ರವರೆಗಿನ ಕರ್ನಾಟಕ ಲೋಕಾಯುಕ್ತದ 9ನೇ ಕ್ರೋಢೀಕೃತ ವಾರ್ಷಿಕ ವರದಿಗಳನ್ನು ಮಂಡಿಸುವುದು.

II. ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿ) ಅವರು :

1964ನೇ ಸಾಲಿನ ಕರ್ನಾಟಕ ಭೂ ಕಂದಾಯ ಅಧಿನಿಯಮದ 194(2)ನೇ ಕಲಮಿನ ಮೇರೆಗೆ,

1) ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 27 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 41,890.16 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 9.1.1996 ರಂದು ಹೊರಡಿಸಲಾದ ಆರ್ ಡಿ 256 ಟಿಆರಎಂ 95ನೇ ಕ್ರಮಾಂಕದ ಅಧಿಸೂಚನೆ.

2) ವಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ 56 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 70,622.67 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 6.1.1996 ರಂದು ಹೊರಡಿಸಲಾದ ಆರಡಿ 262 ಟಿಆರಎಂ 95ನೇ ಕ್ರಮಾಂಕದ ಅಧಿಸೂಚನೆ.

3) ವಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ 16 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 70,343.11 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 31.1.1996 ರಂದು ಹೊರಡಿಸಲಾದ ಆರಡಿ 287 ಟಿಆರಎಂ 95ನೇ ಕ್ರಮಾಂಕದ ಅಧಿಸೂಚನೆ.

4) ವಿಜಾಪುರ ಜಿಲ್ಲೆಯ ಮುದ್ದೆಬಿಹಾಳ ತಾಲ್ಲೂಕಿನ 11 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 10,153.88 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 27.1.1996 ರಂದು ಹೊರಡಿಸಲಾದ ಆರಡಿ 255 ಟಿಆರಎಂ 95ನೇ ಕ್ರಮಾಂಕದ ಅಧಿಸೂಚನೆ.

5) ಸರ್ಕಾರದ ಅಧಿಸೂಚನೆ ಸಂಖ್ಯೆ ಆರಡಿ 255ಟಿಆರಎಂ.95, ದಿನಾಂಕ 27.1.1996ರ ತಿದ್ದುಪಡಿ ಸಂಬಂಧದಲ್ಲಿ (ಮುದ್ದೆಬಿಹಾಳ ಎಂಬ ಪದಕ್ಕೆ ಮುಧೋಳ ಎಂದು ಓದಿಕೊಳ್ಳತಕ್ಕದ್ದು). ದಿನಾಂಕ 12.2.1996 ರಂದು ಹೊರಡಿಸಲಾದ ಆರಡಿ 255 ಟಿಆರೆಎಂ 95ನೇ ಕ್ರಮಾಂಕದ ತಿದ್ದುಪಡಿ.

6) ವಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ 17 ಗ್ರಾಮಗಳ 1994-95ನೇ ಸಾಲಿನ ಭೂ

ಕುದಾಯ 16,250.73 ರೂ.ಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 5.2.1996 ರಂದು ಹೊರಡಿಸಲಾದ ಆರಡಿ 258ಟಿಆರೆಎಂ ಕ್ರಮಾಂಕದ ಅಧಿಸೂಚನೆ.

1957ನೇ ಇಸವಿ ಕರ್ನಾಟಕ ಮುದ್ರಾಂಕ ಅಧಿನಿಯಮ 9(2)ನೇ ಕಲಮಿನ ಮೇರೆಗೆ.

7) ಕೃಷ್ಣಭಾಗ್ಯ ಜಲ ನಿಗಮ ಲಿಮಿಟೆಡ್, ಆಲಮಟ್ಟಿ. ವಿಜಾಪುರ ಜಿಲ್ಲೆ. ಇವರು ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು ಪೂರೈಸುವ ದೃಷ್ಟಿಯಿಂದ 800-00ಕೋಟಿ ರೂ.ಗಳ ಡಿಬೆಂಟರಗಳನ್ನು ಬಿಡುಗಡೆ ಮಾಡಿ ಹಣ ಕ್ರೋಢೀಕರಿಸುವ ಸಂಬಂಧ, ಭಾರತೀಯ ಕೈಗಾರಿಕಾ ಸಾಲ ಮತ್ತು ಬಂಡವಾಳ ಹೂಡಿಕೆ ಕಾರ್ಪೋರೇಷನ್ ಲಿಮಿಟೆಡಗೆ ಬರೆದುಕೊಡಬೇಕಾದ ಅಡಮಾನ ಪತ್ರಕ್ಕೆ ಮುದ್ರಾಂಕ ಶುಲ್ಕ ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 9.8.1995 ರಂದು ಹೊರಡಿಸಲಾದ ಕಂಇ 339 ಮುನೋಮು 95ರ ಆದೇಶಗಳನ್ನು ಮಂಡಿಸುತ್ತೇನೆ.

III. ಶ್ರೀ ಜಿ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಮಂತ್ರಿ)ರವರ ಪರವಾಗಿ :

1993ನೇ ಇಸವಿ ಕರ್ನಾಟಕ ಪಂಚಾಯತರಾಜ್ ಅಧಿನಿಯಮ 320 ನೇ ಕಲಮಿನ ಮೇರೆಗೆ.

1) ಕರ್ನಾಟಕ ಪಂಚಾಯತರಾಜ್(ಗ್ರಾಮ ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷಕರ ಗೌರವ ಧನ(ತಿದ್ದುಪಡಿ) ನಿಯಮಗಳು1995ಕ್ಕೆ ಸಂಬಂಧಿಸಿದಂತೆ ದಿನಾಂಕ30.7.1995 ರಂದು ಹೊರಡಿಸಲಾದ ಗ್ರಾ ಅಫ 849 ಡಿಪಸ 94ರ ಅಧಿಸೂಚನೆ.

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

2) 1989-90ನೇ ಸಾಲಿನ ಕರ್ನಾಟಕ ಭೂ ಸೇನಾ ನಿಗಮ ನಿಯಮಿತದ 16ನೇ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

IV. ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ) ಅವರು :

1956ರ ಕಂಪನಿಗಳ ಕಾಯ್ದೆಯ 619ಎ ಕಲಮಿನ ಮೇರೆಗೆ.

1994-95ನೇ ಸಾಲಿನ ಎನಜಿಇಎಫ್ ನಿಯಮಿತದ 35ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರವನ್ನು ಮಂಡಿಸುತ್ತೇನೆ.

V. ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಕೈಗಾರಿಕಾ ಸಚಿವರು) ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ :

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮದ 48(5) ಹಾಗೂ 49ನೇ ಕಲಮುಗಳ ಮೇರೆಗೆ.

1) 1996-97 1987-88, 1988-89, 1989-90, 1990-91,1991-92, 1992-93, 1993-94 ಹಾಗೂ 1994-95ನೇ ಸಾಲುಗಳ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು ಹಾಗೂ 1986-87ಹಾಗೂ 187-88ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳು.

2) 1993-94ನೇ ಸಾಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.

3) 1989-90, 1990-91, 1991-92, 1992-93, 1993-94 ಹಾಗೂ 1995-96ನೇ ಸಾಲುಗಳ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು.

4) 1991-92, 1992-93 ಹಾಗೂ 1993-94ನೇ ಸಾಲುಗಳ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು ಹಾಗೂ 1991-92, 1992-93, 1993-94 ಹಾಗೂ 1994-95ನೇ ಸಾಲುಗಳ ಲೆಕ್ಕಪರಿಶೋಧನಾ ವರದಿಗಳು.

5) 1994-95ನೇ ಸಾಲಿನ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.

6) 1991-92, 1992-93, 1993-94 ಹಾಗೂ 1994-95ನೇ ಸಾಲುಗಳ ಬೆಳಗಾಂ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿಗಳು ಹಾಗೂ 1991-92ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

7) 1994-95ನೇ ಸಾಲಿನ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.

8) 1994-95ನೇ ಸಾಲಿನ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.

9) 1985-86, 1986-87, 1987-88, 1988-89, 1989-90, 1990-91, 1991-92, 1992-93, ಹಾಗೂ 1993-94ನೇ ಸಾಲುಗಳ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಗಳು.

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಕಾಯ್ದೆಯ 39(1)ನೇ ಕಲಮಿನ ಮೇರೆಗೆ.

10) 1990-91, 1991-92, 1992-93 ಹಾಗೂ 1993-94ನೇ ಸಾಲುಗಳ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VI. ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಕೈಗಾರಿಕಾ ಸಚಿವರು) ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿ) ಅವರ ಪರವಾಗಿ :

1966ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿನಿಯಮದ 25(3)ನೇ ಕಲಮಿನ ಮೇರೆಗೆ.

1992-93, 1993-94 ಹಾಗೂ 1994-95ನೇ ಸಾಲುಗಳ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ 66ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ

(1) ಗುಲ್ಬರ್ಗಾ ವಿಶ್ವ ವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಇಡುವ ಬಗ್ಗೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈ ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವ ಮಾತು ಎಲ್ಲಾ ಕಡೆಯೂ ಕೇಳಿಬರುತ್ತಾ ಇದೆ. ನನಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ದುಃಖ ತರುವಂಥ ಸಂಗತಿಯೆನೆಂದರೆ, ಆ ವಿಶ್ವವಿದ್ಯಾನಿಲಯಕ್ಕೆ ಬಸವಣ್ಣನವರ ಹೆಸರನ್ನು ಇಡಬೇಕೆನ್ನುವುದಕ್ಕಿಂತ ಹೆಚ್ಚು ನೋವನ್ನು ತರುತ್ತಿರುವಂಥ ಸಂಗತಿ, ಅವರ ಹೆಸರನ್ನು ಇಡಬೇಕೆದು 60-70 ಜನ ಶಾಸಕರು ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಮೇಲೆ ಅನೇಕ ಜಾತಿಬೇಧ ಸಂಘಸಂಸ್ಥೆಗಳು ಸರ್ಕಾರಕ್ಕೆ ವಿನಂತಿಯನ್ನು ಮಾಡಿದಮೇಲೆ, ಈ ಒಂದು ಹೆಸರನ್ನು ಇಡಬೇಕೆಂದು ರಾಜ್ಯದಲ್ಲಿ ಹೋರಾಟ ಮಾಡುವಂಥ ಪರಿಸ್ಥಿತಿ ಇಮೊತ್ತು ರಾಜ್ಯದಲ್ಲಿ ನಡೆಯುತ್ತಾ ಇದೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ ಜೊತೆಗೆ ಇವೊತ್ತು ನಾನು ಬಂದತಕ್ಷಣ ಈ ಮಾತನ್ನು ಕೇಳಿದೆ. ನಾನು ತಮ್ಮಲ್ಲಿ ವಿನಂತಿ ಮಾಡುವಂಥದ್ದು, ಶಾಸಕರು ಈಗಾಗಲೇ ಮನವಿಯನ್ನು ಕೊಟ್ಟಿದ್ದಾರೆ. ಒಬ್ಬ ಕಾಯಕ ಪುರುಷ ಬಸವಣ್ಣನವರಂಥ ವ್ಯಕ್ತಿ ಬಗ್ಗೆ ಆ ವಿಶ್ವವಿದ್ಯಾನಿಲಯಕ್ಕೆ ಹೆಸರನ್ನು ಇಡಬೇಕು ಎಂದು ಕೇಳಿದಾಗ ಒಂದು ಕ್ಷಣ ತಡಮಾಡದೆ ತಾವು ಒಪ್ಪಿಕೊಳ್ಳಬೇಕಾಗಿತ್ತು ಎಂಬುದು ನನ್ನ ಭಾವನೆ. ನಾನು ಈಗ ತಮ್ಮಲ್ಲಿ ವಿನಂತಿ ಮಾಡುತ್ತಿರುವಂಥದ್ದು, ಈಗಾಗಲೇ ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಬೀದರನಲ್ಲಿ ಈ ಒಂದು ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯ ಮಾಡಿ 16.0296ರಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದನ್ನು ನಾನು ಕೇಳಿದ್ದೇನೆ. ನಾನು ಉಪಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಜೆ.ಹೆಚ್. ಪಟೇಲರಲ್ಲಿ ವಿನಂತಿ ಮಾಡುತ್ತೇನೆ. ಬಸವ, ಬುದ್ಧ, ಅಂಬೇಡ್ಕರ್, ಇವರೆಲ್ಲಾ ಮಾನವ ಜನಾಂಗಕ್ಕೆ ಸೇರಿದ ವಿಭೂತಿ ಪುರುಷರು. ಇಂತಹವರ ಹೆಸರನ್ನು ಇಡುವ ಪ್ರಶ್ನೆ ಬಂದಾಗ, ಅವರ ಮನಸ್ಸಿನ ಭಾವನೆಯನ್ನು ಅರ್ಥಮಾಡಿಕೊಂಡಾಗ ಒಂದು ರೀತಿ ಗುಲ್ಬರ್ಗಾ ಬಸವಣ್ಣನವರ ಕಾಯಕ ಕ್ಷೇತ್ರ. ಅಲ್ಲಿ ಈ ಪ್ರಶ್ನೆ ಬಂದಾಗ ದಯಮಾಡಿ ಯಾವ ಕಾರಣಕ್ಕೂ ಸಹ ಇಲ್ಲಿ ಕುಳಿತಂಥಹವರು ರಾಜಕಾರಣ ಕೆಲಸಕ್ಕೆ ನಾವು ಸಿದ್ಧರಿಲ್ಲ. ಬಹುಶಃ ಇಲ್ಲಿರುವಂಥ, ಆ ಮನೆಯಲ್ಲಿ ನರಸಿಂಹಮೂರ್ತಿಯವರಂಥ ಹಿರಿಯರು ಅನೇಕ ದಲಿತ ಸಂಘಟನಾ ಸಮಿತಿಯ ಮುಖಂಡರು, ಎಲ್ಲರೂ ಸಹ ಒಕ್ಕೊರಲಿನಿಂದ ಅಲ್ಲಿಗೆ ಬಸವೇಶ್ವರ ವಿಶ್ವವಿದ್ಯಾನಿಲಯ